ಸಚಿವರ ಆಪ್ತ ಶಾಖೆಗಳಲ್ಲಿ ಎಲೆಕ್ಟ್ರಾನಿಕ್ ಆಂಗ್ಲ ಬೆರಳಚ್ಚು ಯಂತ್ರಗಳ ಖರೀದಿ.

305-ಶ್ರೀ ಗುರುಪಾದಪ್ಪ ನಾಗ್ಮಾರಪಲ್ಲಿ (ಔರಾದ್) : ಮಾನ್ಯ ಮುಖ್ಯ ಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮುಖ್ಯಮಂತ್ರಿಗಳ ಕಛೇರಿಯೂ ಸೇರಿದಂತೆ ರಾಜ್ಯದಲ್ಲಿ ಎಲ್ಲಾ ಸಚಿವರ ಕಛೇರಿಗೂ ಎಲೆಕ್ಟ್ರಾನಿಕ್ ಆಂಗ್ಲ ಬೆರಳಚ್ಚು ಯಂತ್ರವನ್ನು ಖರೀದಿ ಮಾಡಲಾಗಿರುವುದೆ?

ಆ) ಹಾಗಿದ್ದಲ್ಲಿ,ಎಷ್ಟು ಎಲೆಕ್ಟ್ರಾನಿಕ್ ಬೆರಳಚ್ಚು ಯಂತ್ರಗಳನ್ನು ಕೊಂಡುಕೊಳ್ಳಲಾಗಿದೆ ಹಾಗೂ ಅವುಗಳನ್ನು ಯಾರಿಂದ ಕೊಂಡುಕೊಳ್ಳಲಾಗಿರುವುದು ?

ಇ) ಅದಕ್ಕೆ ತಗುಲಿದ ಪೂರ್ಣ ವೆಚ್ಚವೆಷ್ಟು ಹಾಗೂ ಒಂದೊಂದು ಎಲೆಕ್ಟ್ರಾನಿಕ್ ಬೆರಳಚ್ಚು ಯಂತ್ರಕ್ಕೆ ತಗಲುವ ವೆಚ್ಚವೆಷ್ಟು ?

ಈ) ಅದಕ್ಕೆ ಪ್ರತಿ ತಿಂಗಳು ತಗಲುವ ನಿರ್ವಹಣಾ ವೆಚ್ಚವೆಷ್ಟು?

ಉ) ಮಾನ್ಯ ಮುಖ್ಯಮಂತ್ರಿಗಳು ಇತ್ತೀಚೆಗೆ ಸರ್ಕಾರದ ಆಡಳಿತದಲ್ಲಿ ಎಲ್ಲಾ ಹಂತದಲ್ಲಿಯೂ ಕನ್ನಡದಲ್ಲಿಯೇ ವ್ಯವಹರಿಸುವುದಾಗಿ ಪ್ರಕಟಿಸಿದ್ದರೂ ಈ ರೀತಿ ದುಬಾರಿ ವೆಚ್ಚದ ಎಲೆಕ್ಟ್ರಾನಿಕ್ ಆಂಗ್ಲ ಬೆರಳಚ್ಚು ಯಂತ್ರಗಳನ್ನು ಕೊಂಡಿರುವುದು ಸರಿಯೇ?

ಊ) ಈ ಬಗ್ಗೆ ಸರ್ಕಾರದ ಮುಂದಿನ ಕ್ರಮವೇನು?

ಶ್ರೀ ಎಸ್. ಬಂಗಾರಪ್ಪ (ಮುಖ್ಯ ಮಂತ್ರಿಗಳು)

ಅ) ಹೌದು.

ಆ) 35, ಗಾಡ್ರೇಜ್ ಕಂಪೆನಿಯಿಂದ 17 ಯಂತ್ರಗಳನ್ನು, ಕಿಯಾನಿಕ್ಸ್ ಕಂಪೆನಿಯಿಂದ 18 ಯಂತ್ರಗಳನ್ನು ಖರೀದಿಸಲಾಗಿದೆ.

ಇ) ಒಟ್ಟು ವೆಚ್ಚ ರೂ. 8,60,000-00 ಸಚಿವ ಸಂಪುಟದ ಮಂತ್ರಿಗಳಿಗೆ ಕೊಟ್ಟ ಗೋದ್ರೇಜ್ ಯಂತ್ರಗಳ ಬೆಲೆ ಒಂದಕ್ಕೆ ರೂ. 26,818-00 ರಾಜ್ಯ ಸಚಿವರುಗಳಿಗೆ ಒದಗಿಸಿದ ಕಿಯಾನಿಕ್ಸ್ ಯಂತ್ರ ಒಂದರ ಬೆಲೆ ರೂ. 21,912-00.

ಈ) ಈ ಯಂತ್ರಗಳನ್ನು ಈಗ ಒಂದು ತಿಂಗಳ ಹಿಂದೆ ಖರೀದಿಸಲಾಗಿದ್ದು, ಗೋದ್ರೇಜ್ ಯಂತ್ರಕ್ಕೆ ತಿಂಗಳೊಂದಕ್ಕೆ ಅಂದಾಜು ರೂ.350-00 ವೆಚ್ಚದಲ್ಲಿ ಹಾಗೂ ಕಿಯಾನಿಕ್ಸ್ ಯಂತ್ರಕ್ಕೆ ತಿಂಗಳೊಂದಕ್ಕೆ ರೂ. 300-00 ವೆಚ್ಚದಲ್ಲಿ ಬಳಕೆ ಪದಾರ್ಥಗಳನ್ನು ಕೊಂಡುಕೊಳ್ಳಲಾಗುತ್ತಿದೆ. ವಾರ್ಷಿಕ ನಿರ್ವಹಣಾ ಒಪ್ಪಂದವನ್ನು ಸಾಧಾರಣವಾಗಿ ಒಂದು ವರ್ಷದ ನಂತರ ಸಂಬಂಧಿತ ಕಂಪನಿಯವರೊಂದಿಗೆ ಮಾಡಿಕೊಳ್ಳಲಾಗುವುದು.

ಉ) ಈ ಯಂತ್ರಗಳು ದ್ವಿಭಾಷಾ ಯಂತ್ರಗಳಾಗಿದ್ದು ಆಂಗ್ಲ ಹಾಗೂ ಕನ್ನಡ ಭಾಷೆಯಲ್ಲಿ ಬೆರಳಚ್ಚು ಮಾಡುವ ಸಾಧ್ಯತೆ ಇದೆ. ಸಚಿವರುಗಳ ಕಛೇರಿಗಳಲ್ಲಿ ಸಾಕಷ್ಟು ಕೆಲಸದ ಒತ್ತಡವಿದ್ದು ಎಲೆಕ್ಟ್ರಾನಿಕ್ ಯಂತ್ರಗಳನ್ನು ಉಪಯೋಗಿಸುವುದರಿಂದ ಶೀಘ್ರವಾಗಿ ಹಾಗೂ ಸ್ವಚ್ಛವಾಗಿ ಬೆರಳಚ್ಚು ಮಾಡಲು ಸಹಾಯವಾಗಿದೆ.

ಊ) ಉದ್ಭವಿಸುವುದಿಲ್ಲ.

ಆಶ್ರಯ ಯೋಜನೆಯಡಿಯಲ್ಲಿ ಮನೆ ನಿವೇಶನಗಳ ವಿತರಣೆ

307 - ಶ್ರೀ ಗುರುಪಾದಪ್ಪ ನಾಗ್ಮಾರಪಲ್ಲಿ (ಔರಾದ್) : ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?